ಓ.ಎಸ್. ನಂಬರ 38/22

ಪಿ .ಡಬ್ಲ್ಯೂ-1

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 14-03-2023.

**ಪಾಟೀ ಸವಾಲು ಃಶ್ರೀ .ಆರ್.ಎಸ್.ಎಚ್. ಪ್ರತಿವಾದಿಗಳ ಪರ ವಕೀಲರಿಂದಃ**

ನಾನು ಆವಾಗ 6 ನೇ ಕ್ಲಾಸ ಕಲಿತಿದ್ದೆ. ನನಗೆ ಓದಲು ಮತ್ತು ಬರೆಯಲು ಬರುತ್ತದೆ. ಯಾವುದಾದರೂ ದಾಖಲಾತಿಗಳು ಕನ್ನಡದಲ್ಲಿ ಇದ್ದರೆ ಓದಿ ತಿಳಿದುಕೊಳ್ಳುತ್ತೇನೆ ಎಂದರೆ ಸರಿ. ನಾನು ಪ್ರಕರಣವನ್ನು ನನ್ನ ಮಕ್ಕಳ ಮೇಲೆ ಮಾಡಿದ್ದೇನೆ. ನನಗೆ ಕಿರಿಕಿರಿ ಮಾಡುವುದಕ್ಕೆ ಈ ಪ್ರಕರಣ ದಾಖಲು ಮಾಡಿದ್ದೇನೆ. ನನ್ನ ಮಕ್ಕಳ ಲಗ್ನ ಆದಾಗಿನಿಂದ ಕಿರಿಕಿರಿ ಮಾಡುತ್ತಿದ್ದಾರೆ. 2017 ರಲ್ಲಿ ಪ್ರಕರಣ ದಾಖಲಿಸಿದ್ದೇನೆ. ಹೊಡೆದು ಬಡೆದು ನನಗೆ ಹೊರಗೆ ಹಾಕಿದ್ದಕ್ಕೆ ಪ್ರಕರಣ ದಾಖಲು ಮಾಡಿದ್ದೇನೆ. ಈ ಪ್ರಕರಣವನ್ನೂ ಸಹ ಅದರ ಸಲುವಾಗೇ ಮಾಡಿದ್ದೇನೆ. ಈ ಪ್ರಕರಣದ ಸಲುವಾಗಿ ನನಗೆ ವೈಯಕ್ತಿಕವಾಗಿ ಸಂಪೂರ್ಣವಾಗಿ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಯಾವ ದಿನಾಂಕ, ತಿಂಗಳು, ಇಸ್ವಿಯಂದು ಹೊಡೆಬಡೆ, ಕಿರಿಕಿರಿ ಮಾಡಿದ್ದಾರೆ ಅಂತ ಹೇಳಲು ಬರುವುದಿಲ್ಲ ಎಂಬ ಪ್ರಶ್ನೆಗೆ ನನಗೆ ವಯಸ್ಸಾಗಿದ್ದು , ನೆನಪಿಲ್ಲ ಹಾಗೂ 5 ವರ್ಷಗಳ ಹಿಂದೆ ಹೊಡೆಬಡಿ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ಪ್ರಸ್ತುತ ಪ್ರಕರಣವನ್ನು 5 ವರ್ಷಗಳ ಹಿಂದೆ ದಾಖಲು ಮಾಡಿದ್ದಿರಾ ಎಂಬ ಪ್ರಶ್ನೆಗೆ ನೆನಪಿಲ್ಲ ಎಂದು ಉತ್ತರಿಸುತ್ತಾರೆ. ಪ್ರತಿವಾದಿಗಳು ಮತ್ತು ನಾನು 5 ವರ್ಷಗಳ ಹಿಂದೆ ಚೆನ್ನಾಗಿ ಇದ್ದೆವು, ಈಗ ಇಲ್ಲ. ಜಮೀನುಗಳೆಲ್ಲ ನೀವು ಕೂಡಿಕೊಂಡು ಮಾಡುತ್ತಿರಿ ಎಂದರೆ ಸರಿಯಲ್ಲ. ಎಷ್ಟು ಆಸ್ತಿಗಳ ಸಂಬಂಧವಾಗಿ ಈ ಕೇಸ ಮಾಡಿದ್ದಿರಿ ಎಂಬ ಪ್ರಶ್ನೆಗೆ ಅದೆಲ್ಲ ನಮ್ಮ ವಕೀಲರಿಗೆ ಹೇಳಿದ್ದೇನೆ ಎಂದು ಉತ್ತರಿಸುತ್ತಾರೆ. ಈ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ನಮ್ಮ ವಕೀಲರಿಗೆ ಇದೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಬರೆಯಲಿಕ್ಕೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ಅದರಲ್ಲಿ ಹೇಳಿ ಬರೆಸಿರುವುದೆಲ್ಲ ಖರೇ ಇದೆ.

2. ಈ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಯಾರು ತೆಗೆಸಿದರು ಹೇಳಲಿಕ್ಕೆ ಬರುತ್ತದೆಯಾ ಎಂಬ ಪ್ರಶ್ನೆಗೆ ಇಲ್ಲ ಎಂದು ಉತ್ತರಿಸುತ್ತಾರೆ. ಇಲ್ಲಿ ಹಾಜರಪಡಿಸಿರುವ ಕಾಗದಪತ್ರಗಳನ್ನು ನಾನು ಪರಿಶೀಲಿಸಿರುತ್ತೇನೆ. ಸರ್ವೆ ನಂ. 22, 7 ಎಕರೆ 8 ಗುಂಟೆ ಇದೆ, ಇನ್ನೊಂದು ಸರ್ವೆ ನಂ. 108, 3 ಎಕರೆ 33 ಗುಂಟೆ ಇದೆ, 11 ಗುಂಟೆಗೆ ಸಂಬಂಧಿಸಿದಂತೆ /1 ಮತ್ತು /2 ಇರುತ್ತದೆ. ಈ ಎರಡೂ ಜಮೀನುಗಳು ಮಸಾರಿ ಜಮೀನುಗಳಾಗಿರುತ್ತವೆ. ಆ ಜಮೀನುಗಳಿಗೆ ಸಂಬಂಧಿಸಿದ ಪಹಣಿ ಉತಾರಗಳನ್ನು ನಾನು ನೋಡಿದ್ದೇನೆ. ಅವು ನನ್ನ ಪ್ರಕಾರ ಕೃಷಿ ಜಮೀನುಗಳಾಗಿರುತ್ತವೆ. ಸರ್ವೆ ನಂ. 1 ನಿಶಾನೆ ಪಿ 9 ರಲ್ಲಿ ಉಲ್ಲೇಖಿಸಿದಂತೆ ಬಿನಶೆತ್ಕಿ ಜಮೀನು ಅಂತ ನಮೂದಾಗಿರುತ್ತದೆ ಎಂದರೆ ಸರಿ. ಈ ಜಮೀನನ್ನು ನಮ್ಮ ವಾದಪತ್ರದಲ್ಲಿ ಕೃಷಿ ಜಮೀನು ಅಂತ ಕಾಣಿಸಿದ್ದೇವೆ ಎಂಬ ಪ್ರಶ್ನೆಗೆ ಅದೆಲ್ಲ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಗೊತ್ತಿದ್ದೇ ನಮ್ಮ ವಕೀಲರಿಗೆ ಮಾಹಿತಿಯನ್ನು ಪೂರೈಸಿರುತ್ತೇನೆ. ಇದನ್ನು ತಪ್ಪಾಗಿ ಕಾಣಿಸಿದ್ದೇನೆ ಎಂಬ ಪ್ರಶ್ನೆಗೆ ಅದೆಲ್ಲ ನನಗೆ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ. ದಾವಾಸ್ತಿಗಳು ನನಗೆ ಭಕ್ಷೀಶ ಮೂಲಕ ಬಂದಿರುತ್ತದೆ. ಸಾವಿತ್ರವ್ವ ಕೋಂ ಫಕ್ಕೀರಯ್ಯಾ ಹಿರೇಮಠ ಇವರು ಭಕ್ಷೀಶ ಮಾಡಿರುತ್ತಾರೆ. ದಿಃ 24-02-1998 ರಲ್ಲಿ ಭಕ್ಷೀಶ ಮಾಡಿರುತ್ತಾರೆ. ಭಕ್ಷೀಶ ಆಗಿರುವ ಬಗ್ಗೆ ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರ ಮಾಡಿದ್ದೇನೆ. ಆ ರೀತಿ ಭಕ್ಷೀಶ ಆಗಿರುವ ಬಗ್ಗೆ ದಾಖಲಾತಿಗಳನ್ನು ಹಾಜರಪಡಿಸಿಲ್ಲ ಎಂದರೆ

ಸರಿಯಲ್ಲ. ಸ್ದ್ರಿ ಭಕ್ಷೀಶ ಪತ್ರವನ್ನು ಶಿರಸಿ ನೋಂದಣಿ ಆಫೀಸಿನಲ್ಲಿ ನೋಂದಣಿ ಮಾಡಿಸಿರುತ್ತೇನೆ. ಸರ್ವೆ ನಂ. 1 ರ ಚೆಕಬಂಧಿ ಇದೆಯಾ ಎಂಬ ಪ್ರಶ್ನೆಗೆ ಅದು ಪ್ಲಾಟ ಆಗಿದ್ದು ಅವೆಲ್ಲ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

ಮುಂದುವರೆದ ಪಾಟೀ ಸವಾಲಿಗಾಗಿ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸರಿ ಇದೆ.

**ಸಿವಿಲ್ ಜಡ್ಜ, ಮುಂಡಗೋಡ.**